

# ಯಃಕಶ್ಚಿತ್ ಒಂದು ಇರುವೆಯ ಕಥೆ!

■ ಗೌರಿ

**ಅಸ್ತಿತ್ವಕ್ಕಾಗಿ ಪ್ರತಿಜೀವಿಯೂ ಪ್ರತಿಕ್ಷಣ ನಡೆಸುವ ಹೋರಾಟದ ರೂಪಕವಾಗಿ ಈ ಚಿತ್ರವನ್ನು ನೋಡಬಹುದು.**

ಅಸ್ತಿತ್ವದ ಹೋರಾಟ ಎನ್ನುವುದು ಈ ಜಗತ್ತಿನ ಪ್ರತಿಯೊಂದು ಜೀವಿಯೂ ಪ್ರತಿಯೊಂದು ಕ್ಷಣದಲ್ಲಿಯೂ ಎದುರಿಸುತ್ತಲೇ ಇರುವ ಸವಾಲು. 'ಆನೆಯ ಭಾರ ಆನೆಗೆ; ಇರುವೆಯ ಭಾರ ಇರುವೆಗೆ' ಎಂಬ ಮಾತಿದೆಯಲ್ಲ. ಅಂದರೆ ಜಗತ್ತಿನ ಅತಿ ದೊಡ್ಡ, ಬಲಶಾಲಿ ಪ್ರಾಣಿಯೂ ಅತಿ ಚಿಕ್ಕ ದುರ್ಬಲ ಜೀವಿಯೂ ತನ್ನ ಜಗತ್ತಿನಲ್ಲಿ ಎದುರಾಗುವ ಸವಾಲುಗಳನ್ನು ನೀಗಿಸಿಕೊಂಡು ಬದುಕುವುದಕ್ಕಾಗಿ ಹೋರಾಡುತ್ತಲೇ ಇರುತ್ತದೆ. ಈ ಹೋರಾಟಗಳ ಸೋಲು ಗೆಲುವುಗಳ ಸರಪಳಿಯಲ್ಲಿಯೇ ಈ ಜೀವಜಾಲ ಹೆಣೆದುಕೊಂಡಿದೆ; ಈ ಭೂಮಿಯ ಸೃಷ್ಟಿಸೂತ್ರವಿದೆ.

ಉಳಿಯುವಿಕೆಯ ಹೋರಾಟವನ್ನು ಸೂಕ್ಷ್ಮ ಮತ್ತು ಅಗಾಧಗಳ ವೈರುಧ್ಯವನ್ನು ಹಿನ್ನೆಲೆಯಾಗಿಸಿಕೊಂಡು ಕಾಣಿಸುವ ಕಿರುಚಿತ್ರ 'ಓವರ್‌ರನ್'. ಇದು ಮನುಷ್ಯನ ಕಣ್ಣಿಗೆ ಕಾಣುವ ಅತಿಚಿಕ್ಕ ಜೀವಿಗಳಲ್ಲಿ ಒಂದಾದ ಇರುವೆಯ ಮೂಲಕ ಹೊಸದೊಂದು ಜಗತ್ತನ್ನು ನಮಗೆ ದರ್ಶಿಸುತ್ತದೆ. ಇರುವೆಯನ್ನು ಮನುಷ್ಯನ ಕಣ್ಣಿನಲ್ಲಿ ನೋಡುವುದಲ್ಲ; ಇರುವೆಯ ಜಗವನ್ನು ಇರುವೆಯದೇ ಕಣ್ಣಿನಲ್ಲಿ ನೋಡುವ ಪ್ರಯತ್ನವಿದು. ಅಷ್ಟೇ ಅಲ್ಲ, ಆ ಇರುವೆ ಜೊತೆಗೆ ನಮ್ಮ ಮನಸ್ಸನ್ನೂ ಅಷ್ಟೇ ಸೂಕ್ಷ್ಮವಾಗಿಸಿ, ಅದರ ನೋವು, ಆತಂಕ, ಅನುಭವಗಳನ್ನು ನಮ್ಮದೂ ಆಗಿಸುವ ಕಾರಣಕ್ಕೆ ಈ ಕಿರುಚಿತ್ರ ಗಮನಸೆಳೆಯುತ್ತದೆ.

ಇದು ಕಂಪ್ಯೂಟರ್ ಗ್ರಾಫಿಕ್ಸ್ ತಂತ್ರಜ್ಞಾನ ಬಳಸಿ ರೂಪಿಸಿದ ಆ್ಯನಿಮೇಶನ್ ಚಿತ್ರ. ಆದರೆ ಸಿಜಿ ತಂತ್ರಜ್ಞಾನದ ಕೃತಕ ಮೇಲಾಟದಲ್ಲಿ ಕಥೆ ಆತ್ಮಹೀನವಾಗಿಲ್ಲ ಎನ್ನುವುದನ್ನು ಗಮನಿಸಬೇಕು. ತೆರೆಯ ಮೇಲೆ ಆ್ಯನಿಮೇಶನ್ ಇರುವೆ ಓಡಾಡುತ್ತಿದ್ದರೂ ಅದರೊಟ್ಟಿಗೇ ನಮ್ಮ ಮನಸ್ಸೂ ಪಯಣಿಸುತ್ತಿರುತ್ತದೆ. ಕಣ್ಣೆದುರು ಫ್ಯಾಂಟಸಿ ಜಗತ್ತೊಂದು ತೆರೆದುಕೊಳ್ಳುತ್ತ ಹೋದರೂ ಆ ಜಗತ್ತು ನಮ್ಮೊಳಗೆ ಉಂಟು ಮಾಡುವ ಅನುಭವ

| | |
|---|---|
| **ಹೆಸರು:** | ಓವರ್‌ರನ್ (ಫ್ರಾನ್ಸ್) |
| **ನಿರ್ದೇಶನ:** | ಜೆರಿಮಿ ಕೊಟಾರ್ಡ್, ಆಂಟೋನಿನ್ ಡೆರೊರಿ, ಮ್ಯಾಥ್ಯೂ ಡ್ರೂಆವುಡ್, ಪಿಯೆರಿ ರೋಪಾರ್ಸ್, ಡಿಯಾನ್ ಥಿರಾವುಲ್ಟ್, ಆಡ್ರಿಯನ್ ಜುಂಬಿಲ್ |
| **ನಿರ್ಮಾಪಕರು:** | ಎಕೊಲೆ ಮೊಪಾ |
| **ಸಂಗೀತ:** | ಜೋರ್ಡಾನ್ ರೀಸ್ |

ವಾಸ್ತವದ್ದೂ ಆಗಿರುತ್ತದೆ. ಈ ಕಾರಣಕ್ಕಾಗಿಯೇ ಓವರ್‌ರನ್, ಬರೀ ಇರುವೆ ಓಟವಾಗಿರದೇ ಈ ಜಗತ್ತಿನಲ್ಲಿ, ಈ ಬದುಕಿನಲ್ಲಿ ನಮ್ಮೆಲ್ಲರ ಅನುದಿನದ ಓಟವಾಗಿಯೂ ಕಾಣಿಸುತ್ತದೆ.

ಒಂದು ಇರುವೆ ಆಳವಾದ, ಕೊನೆಯೇ ಇಲ್ಲವೇನೋ ಎಂಬಂತಿರುವ ಪ್ರಪಾತದಂತಹ ಅಪರಿಚಿತ ಜಾಗದಲ್ಲಿ ಜಾರಿಬಿದ್ದಿದೆ. ಅಲ್ಲಿನ ನೆಲ, ಸುತ್ತಲಿನ ಗೋಡೆ, ಅದರ ಮೇಲಿನ ಬೆಳಕಿನ ದೀಪದಂಥ ವಸ್ತುಗಳು ಎಲ್ಲವೂ ಹೊಸತು. ಕಣ್ಣು ಚಾಚಿದಷ್ಟೂ ದೂರ ಚಿತ್ರ ವಿಚಿತ್ರ ಆಕೃತಿಗಳು. ಆ ಜಗತ್ತಿನ ಚಲನೆಯೇ ಬೇರೆ. ಇಂಥ ಜಾಗದಲ್ಲಿ ಬಿದ್ದ ಇರುವೆ ಅಲ್ಲಿಂದ ಹೊರಬರುವ ದಾರಿ ಹುಡುಕುತ್ತ ಎತ್ತೆತ್ತಲೋ ಅಲೆಯುತ್ತದೆ. ಅಲೆಯುತ್ತ ಅಲೆಯುತ್ತಲೇ ಆ ಜಗದ ಚಲನೆಯನ್ನು, ಅಲ್ಲಿನ ವಸ್ತು, ವಿಷಯ, ವ್ಯಾಕರಣವನ್ನು ಅರ್ಥ ಮಾಡಿಕೊಳ್ಳುತ್ತ ಹೋಗುತ್ತದೆ. ಆ ಜಾಗದ ಪರಿಚಯ ಆಗುತ್ತಿದೆ ಎಂದು ನೆಮ್ಮದಿ ಮೂಡುವಷ್ಟರಲ್ಲಿಯೇ ಘೋರ ಶಬ್ದ! ಜೊತೆಜೊತೆಯೇ ಅಗಾಧ ಕಂಪನ. ಮೇಲೆ ಕಾಣುವ ದೊಡ್ಡ ಅವಕಾಶದಿಂದ ಏನೋ ಒಂದು ಬೀಳುತ್ತಿದೆ. ತನ್ನ ಮೈಮೇಲೇ ಬಿದ್ದ ಆ ವಸ್ತುವಿನಿಂದ ಇರುವೆ ಇನ್ನಷ್ಟು ಕೆಳಕ್ಕೆ, ತಳದ ಜಗತ್ತಿಗೆ ಜಾರಿ ಹೋಗುತ್ತದೆ. ಒಮ್ಮೆಲೇ ಗುಡುಗು ಸಿಡಿಲಿನಂಥ ಶಬ್ದ, ಏನೋ ವಿಚಿತ್ರವಾದ ವಸ್ತು ತನ್ನನ್ನು ಮೆತ್ತಿಕೊಳ್ಳುತ್ತಿರುವ ಹಾಗೆ, ಮುತ್ತಿಕೊಳ್ಳುತ್ತಿರುವ ಹಾಗೆ ಭಾಸವಾಗಿ ಮುಚ್ಚಿಹೋದ ಇರುವೆ ಹರಸಾಹಸದಿಂದ ಹೊರಜಿಗಿಯುವ ಪ್ರಯತ್ನದಲ್ಲಿ ಒಂದು ಕಾಲೂ ಕಳೆದುಹೋಗುತ್ತದೆ.

ಏಳು ನಿಮಿಷ ಅವಧಿಯ ಈ ಕಿರುಚಿತ್ರ ಇರುವೆಯ 'ಸರ್ವೈವಲ್ ರನ್' ಅನ್ನೇ ತೋರಿಸುತ್ತ ಹೋಗುತ್ತದೆ. ಆ ಮಹಾಪ್ರಯಾಣದ ನಿಗೂಢ ರೋಮಾಂಚನಕ್ಕೆ ಕೊನೆಯಲ್ಲಿ ಬೇರೆಯದೇ ತಿರುವು ಸಿಗುತ್ತದೆ. ಈ ತಿರುವಿನಲ್ಲಿ ಥ್ರಿಲ್ ಜೊತೆಗೆ ಜೀವಜಾಲದ ಮೂಲಭೂತ ಸತ್ಯದ ರೂಪಕವೂ ಇದೆ.

ಹೇಗೋ ಒದ್ದಾಡುವ ಇರುವೆ ಮನುಷ್ಯನೊಬ್ಬನ ಕಣ್ಣೊಳಗಿಂದ ಹೊರಬರುತ್ತದೆ! ಅಂದರೆ ಇಷ್ಟು ಹೊತ್ತಿನವರೆಗೆ ಅದು ಜೀವ ಉಳಿಸಿಕೊಳ್ಳಲು ಮಹಾಪ್ರಯಾಣ ಮಾಡಿದ್ದು ಮನುಷ್ಯನೊಬ್ಬನ ಕಣ್ಣೊಳಗೆ! ಚಿತ್ರದ ಕೊನೆಯ ದೃಶ್ಯದಲ್ಲಿ ಮನುಷ್ಯನ ಕಣ್ಣೊಳಗಿಂದ ಹೊರಬರುವ ಇರುವೆ ಅಲ್ಲಿಂದ ಸರಿದುಹೋಗುತ್ತದೆ. ಕಣ್ಣು ನಿಶ್ಚಲವಾಗಿದೆ; ಅವನ ದೇಹ ನಿಶ್ಚಲವಾಗಿದೆ; ಮುಖದ ಮೇಲೆ ಗಾಯದ ಗುರುತಿದೆ. ಅದು ಬಯಲಲ್ಲಿ ಬಿದ್ದಿರುವ ಮೃತದೇಹ. ನೋಡಿದರೆ ಯುದ್ಧದಲ್ಲಿ ಹತ್ಯೆಯಾದ ಸೈನಿಕನಂತಿದ್ದಾನೆ.

ಮನುಷ್ಯನ ಕಣ್ಣೊಳಗೆ ಸಿಕ್ಕಿಕೊಂಡಿದ್ದ ಇರುವೆ ತನ್ನ ಜಗತ್ತಿನಲ್ಲಿ ಎದುರಾದ ಎಲ್ಲ ಸವಾಲುಗಳನ್ನು ಎದುರಿಸಿ ಬದುಕುಳಿದಿದೆ. ಮನುಷ್ಯ ತನ್ನ ಜಗತ್ತಿನ ಸವಾಲುಗಳಿಗೆ ಎದೆಗೊಡಲಾಗದೆ ಸತ್ತುಹೋಗಿದ್ದಾನೆ. ಯಾರು ಬಲಶಾಲಿ? ಯಾರು ದುರ್ಬಲ?

ಈ ಕಿರುಚಿತ್ರ ವೀಕ್ಷಣೆಗೆ bit.ly/31ZqxCx ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.